OS No.8/2017
Pw1

ದಿನಾಂಕ 04.12.2025 ರಂದು ವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಿಂದಃ**

ದಿನಾಂಕ 25.06.1992 ರ ಕ್ರಯದ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ. ಸದರಿ ಕರಾರು ಪತ್ರ ನೊಂದಣಿ ಆಗಿತ್ತ ಎಂದರೆ ಹೌದು ಎಂದು ನುಡಿದಿರುತ್ತಾರೆ. ಸದರಿ ಕರಾರುಪತ್ರವನ್ನು ಪ್ರತಿವಾದಿ ಮಾಡಿಕೊಟ್ಟಿರುವುದಿಲ್ಲ ಹಾಗೂ ದಾವಾ ಸ್ವತ್ತಿನ ಸ್ವಾಧೀನವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 9/1994 ರ ತೀರ್ಪನ್ನು ಹಾಜರು ಪಡಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ. ಅಸಲು ದಾವಾ ಸಂಖ್ಯೆ 9/1994 ರಲ್ಲಿ ಈ ದಾವೆಯ ಪ್ರತಿವಾದಿಯರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ. ಅಸಲು ದಾವಾ ಸಂಖ್ಯೆ 110A/2009 ನ್ನು ಬಸಮ್ಮ ರವರು ಮಾಡಿಕೊಟ್ಟಿದ್ದ ಕರಾರು ಪತ್ರದ ಮೇಲೆ ಪ್ರತಿವಾದಿಯರು ಹೂಡಿದ್ದರು ಎಂದರೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಪ್ರತಿವಾದಿಯರ ವಿರುದ್ದ ಅಸಲು ದಾವಾ ಸಂಖ್ಯೆ 110/2009 ರಲ್ಲಿ ದಾವೆಯನ್ನು ನೀವು ಹೂಡಿರುತ್ತೀರಿ ಎಂದರೆ ಸರಿ. ಸದರಿ ದಾವಾ ವಜಾ ಆಗಿರುತ್ತದೆ ಎಂದರೆ ನಮ್ಮ ಪರ ಆಗಿರುತ್ತದೆ ಎಂದು ನುಡಿದಿರುತ್ತಾರೆ.

ನಿಪಿ-3 ರಿಂದ 5 2015 ರ ನಂತರ ಆಗಿರುವ ಪಹಣಿಗಳು ಎಂದರೆ ಸರಿ. ನಿಪಿ-3 ರಿಂದ 5 ಆಗುವ ಮೊದಲಿಗೆ ಪ್ರತಿವಾದಿ 1 ರವರ ತಂದೆ ಹೆಸರಿನಲಿ ಬರುತ್ತಿದ್ದವು ಎಂದರೆ ಸರಿ. ಮುಂದುವರೆದು ಅವರು ದೊಡ್ಡ ಮಗ ಆದ್ದರಿಂದ ಬರುತ್ತಿದ್ದವು ಎಂದು ನುಡಿದಿರುತ್ತಾರೆ. ಸುಮಾರು 50 ವರ್ಷದಿಂದ ಇಲ್ಲಿಯವರೆಗೂ ಪ್ರತಿವಾದಿಯರು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. 1999 ರಿಂದ ದಾವಾ ಸ್ವತ್ತಿನ ಸಂಬಂಧ ವ್ಯಾಜ್ಯಗಳು ನಡೆಯುತ್ತಿದ್ದು ಈಗಲೂ ಸಹ ಪ್ರತಿವಾದಿಯರೇ ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಸಂಬಂಧ ಲೋನ್ ಪಡೆದುಕೊಂಡಿರುತ್ತೀರಾ ಎಂದರೆ ಹೌದು ಎಂದು ನುಡಿದಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ದಾಖಲಾತಿಯನ್ನು ಹಾಜರು ಪಡಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತುಗಳಲ್ಲಿ ನೀವು ಬೆಳೆ ಬೆಳೆದಿರುವ ಸಂಬಂಧ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂದರೆ ಮನೆಯಲ್ಲಿ ಇರುತ್ತವೆ ತಂದು ಹಾಜರು ಪಡಿಸುತ್ತೇನೆ ಎಂದು ನುಡಿದಿರುತ್ತಾರೆ. ಸುಮಾರು 6 ತಿಂಗಳ ಹಿಂದೆ ನೀವು ಮತ್ತು ನಿಮ್ಮ ಮಗಳು ಪೊಲೀಸ್ ಠಾಣೆಗೆ ಹೋಗಿರುತ್ತೀರಿ ಎಂದರೆ ಸರಿ. ನೀವು ಪ್ರತಿವಾದಿಗಳು ಬಾಳೇ ಗಿಡವನ್ನು ನೆಡುತ್ತಿದ್ದಾರೆ ಅದನ್ನು ತೆಗೆಸಿ ನಮಗೆ ದಾವಾ ಸ್ವತ್ತನ್ನು ಕೊಡಿಸಬೇಕೆಂದು ಕೇಳಿರುತ್ತೀರಿ ಎಂದರೆ ಸರಿಯಲ್ಲ. ಮುಂದುವರೆದು ನಮ್ಮ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದಾರೆ ಎಂದು ಹೋಗ್ಗಿದ್ದೇವು ಎಂದು ನುಡಿದಿರುತ್ತಾರೆ. ಪೊಲೀಸರಿಗೆ ದೂರನ್ನು ನೀವು ನೀಡಿರುತ್ತೀರಾ ಎಂದರೆ ಹೌದು ಎಂದು ನುಡಿದಿರುತ್ತಾರೆ. ಸದರಿ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂದರೆ

OS No.8/2017
Pw1

ಹೌದು ಎಂದು ನುಡಿದಿರುತ್ತಾರೆ. ಪೊಲೀಸರು ದಾವಾ ಸ್ವತ್ತಿನ ಸಂಬಂಧ ಕೇಸು ಇರುವ ಕಾರಣ ಮುಗಿಸಿಕೊಂಡು ಬನ್ನಿ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸಂಬಂಧ ಮಾನ್ಯ ಸರ್ವೊಚ್ಚ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದೆ ಎಂದರೆ ಸರಿ. ಸುಮಾರು 50 ವರ್ಷದಿಂದ ಪ್ರತಿವಾದಿಗಳು ಮತ್ತು ಅವರ ತಂದೆ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದು ನೀವು ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ತಮಗೆ ಸ್ವಾಧೀನ ಬಿಟ್ಟು ಕೊಡಬೇಕೆಂದು ಎಲ್ಲಿಯೂ ಸಹ ಆದೇಶ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-4 ರಿಂದ 6 ಅನ್ನು ಸೃಷ್ಟಿಪಡಿಸಿಕೊಂಡು ಸುಳ್ಳು ದಾವೆ ಹೂಡಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಪ್ರತಿವಾದಿಗಳೆ ಮಾಲೀಕರು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಗಿದೆ)

ಓ ಹೇ ಕೇ ಸ ಇದೆ

**1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ**
**ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ.**